ಕರ್ನಾಟಕ ಸರ್ಕಾರ

ಅರಣ್ಯ ಇಲಾಖೆ

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ (ಪ್ರಾದೇಶಿಕ), ಚಾಮರಾಜನಗರ

ಸುಲ್ತಾನ್ ಷರೀಫ್ ವೃತ್ತ, ಸತ್ಯಮಂಗಲ ರಸ್ತೆ,
ಚಾಮರಾಜನಗರ – 571 313
ದೂರವಾಣಿ : ಕಚೇರಿ: 08226-226229/ 30
ಫ್ಯಾಕ್ಸ್: 08226-226229
ಈ ಮೈಲ್ : chncirccf@gmail.com

ಸಂಖ್ಯೆ: ಎ2/ಸಿಬ್ಬಂದಿ/ಆ.ಕ(ಬ್ಯಾಕ್‌ಲಾಗ್)/ನೇ.ನೇ/ಸಿಆರ್–4/2017–18 ದಿನಾಂಕ: 17–07–2017.

ಇವರಿಗೆ,

**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು,**
(ಅರಣ್ಯಪಡೆ ಮುಖ್ಯಸ್ಥರು), ಅರಣ್ಯ ಭವನ,
ಮಲ್ಲೇಶ್ವರಂ, ಬೆಂಗಳೂರು.

ಮಾನ್ಯರೇ,

**ವಿಷಯ : 2017–18ನೇ ಸಾಲಿನಲ್ಲಿ ಚಾಮರಾಜನಗರ ಅರಣ್ಯ ವೃತ್ತದಲ್ಲಿ ಆನೆ ಕಾವಾಡಿಗೆ (ಬ್ಯಾಕ್‌ಲಾಗ್) ನೇರ ನೇಮಕಾತಿ ಮೂಲಕ ಅಭ್ಯರ್ಥಿಗಳನ್ನು ಭರ್ತಿ ಮಾಡುವ ಕುರಿತು.**

**ಉಲ್ಲೇಖ :**
1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ/ಸೇಇಮ–3/2015 ಬೆಂಗಳೂರು ದಿನಾಂಕ: 03.10.2015.
2. ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಬೆಂಗಳೂರು ರವರ ಅಧಿಸೂಚನೆ ಸಂಖ್ಯೆ: ಎಫ್‌ಇಇ 258/ಎಫ್‌ಎನ್‌ಜಿ 08 ಬೆಂಗಳೂರು ದಿನಾಂಕ: 09.03.2009.
3. ತಮ್ಮ ಕಛೇರಿ ಪತ್ರ ಸಂಖ್ಯೆ: ಬಿ3/ಸಿಬ್ಬಂದಿ/ಸಿಆರ್–140/2013–14 ದಿನಾಂಕ: 15.04.2017.
4. ಈ ಕಛೇರಿ ಅಧಿಸೂಚನೆ ಪತ್ರ ದಿನಾಂಕ: 26.04.2017.
5. ಈ ಕಛೇರಿ ಅಧಿಕೃತ ಜ್ಞಾಪನಾ ಪತ್ರ ಸಮ ಸಂಖ್ಯೆ. ದಿನಾಂಕ: 24.05.2017.
6. ಈ ಕಛೇರಿ ಪತ್ರ ಸಂಖ್ಯೆ: ಎ2/ಸಿಬ್ಬಂದಿ/ಆ.ಕ(ಬ್ಯಾಕ್‌ಲಾಗ್)/ನೇ.ನೇ/ಸಿಆರ್–4/2017–18 ದಿನಾಂಕ: 19.06.2017.
7. ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಅಧ್ಯಕ್ಷರು, ಆನೆ ಕಾವಾಡಿಗಳ ಆಯ್ಕೆ ಪ್ರಕ್ರಿಯೆ ಸಮಿತಿ, ಮಲೈ ಮಹದೇಶ್ವರ ವನ್ಯಜೀವಿ ವಿಭಾಗ, ಕೊಳ್ಳೇಗಾಲ ಇವರ ಪತ್ರ ಸಂಖ್ಯೆ: ಎ2/ಸಿಬ್ಬಂದಿ/ಆ.ಕ.ಬ & ಆನೇನೇ/ಸಿಆರ್–12/2016–17 ದಿನಾಂಕ: 13.07.2017.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (3)ರ ತಮ್ಮ ಪತ್ರದಲ್ಲಿ 2017–18ನೇ ಸಾಲಿನಲ್ಲಿ ಚಾಮರಾಜನಗರ ವೃತ್ತ ವ್ಯಾಪ್ತಿಯಲ್ಲಿ ಆನೆ ಕಾವಾಡಿಗರ (ಬ್ಯಾಕ್‌ಲಾಗ್) ನೇರ ನೇಮಕಾತಿ ಪ್ರಕ್ರಿಯೆಯನ್ನು ಕೈಗೊಳ್ಳಲು ನಿರ್ದೇಶನ ನೀಡಿದ್ದು, ಅದರಂತೆ ಈ ಕಛೇರಿಯ ಉಲ್ಲೇಖ (4)ರಲ್ಲಿ ಅಧಿಸೂಚನೆಯನ್ನು ಹೊರಡಿಸಿದ್ದು, ಅಭ್ಯರ್ಥಿಗಳಿಂದ ಅರ್ಜಿಗಳನ್ನು ದಿನಾಂಕ: 15.05.2017 ರಿಂದ 14.06.2017ರ ಸಂಜೆ 5.30 ರವರೆಗೆ ಆಹ್ವಾನಿಸಲಾಗಿರುತ್ತದೆ. ಸದರಿ ಅಭ್ಯರ್ಥಿಗಳಿಂದ ಬಂದತಂಹ ಅರ್ಜಿಗಳನ್ನು ಪರಿಶೀಲಿಸಲು ಈ ಕಛೇರಿಯಿಂದ ಅರ್ಜಿ ಪರಿಶೀಲನಾ ಸಮಿತಿಯನ್ನು ಹಾಗೂ ಆಯ್ಕೆ ಪ್ರಕ್ರಿಯ ಸಮಿತಿಯನ್ನು ರಚಿಸಿದ್ದು, ಅರ್ಜಿ ಪರಿಶೀಲನಾ ಸಮಿತಿಯು ಸ್ವೀಕೃತವಾದ ಒಟ್ಟು 82 ಅರ್ಜಿಗಳನ್ನು ಪರಿಶೀಲಿಸಿ ಅದರಲ್ಲಿ ಅರ್ಹರಿರುವ 9 ಅರ್ಜಿಗಳನ್ನು ಮಾತ್ರ ಗಣನೆಗೆ ತೆಗೆದುಕೊಂಡು ಸಂದರ್ಶನಕ್ಕೆ ಅಂಗೀಕರಿಸಿ ಆಯ್ಕೆ ಮಾಡಲಾಗಿರುತ್ತದೆ ಮತ್ತು ಸದರಿ ಆನೆ ಕಾವಾಡಿ ಹುದ್ದೆಯ ಸಂದರ್ಶನಕ್ಕೆ ಆಯ್ಕೆಯಾದ ಅಭ್ಯರ್ಥಿಗಳಿಗೆ ದಿನಾಂಕ: 03.07.2017 ರಂದು ಸಂದರ್ಶನಕ್ಕೆ ಮೂಲೆಹೊಳೆ ವನ್ಯಜೀವಿ ವಲಯ, ಮೂಲೆಹೊಳೆ ಇಲ್ಲಿ ಹಾಜರಾಗುವಂತೆ ನೋಂದಾಯಿತ ಅಂಚೆಯ ಮೂಲಕ ಪತ್ರವನ್ನು

ಕಳುಹಿಸಲಾಗಿರುತ್ತದೆ. ಅದರಂತೆ ದಿನಾಂಕ: 03.07.2017 ರಂದು ಮೂಲೆಹೊಳೆ ವನ್ಯಜೀವಿ ವಲಯದಲ್ಲಿ ಸಂದರ್ಶನ ಪ್ರಕ್ರಿಯೆ ಕೈಗೊಂಡಿದ್ದು, ಸಂದರ್ಶನಕ್ಕೆ 9 ಅಭ್ಯರ್ಥಿಗಳ ಪೈಕಿ 3 ಅಭ್ಯರ್ಥಿಗಳು ಮಾತ್ರ ಹಾಜರಾಗಿರುತ್ತಾರೆ. ಸದರಿ ಅಭ್ಯರ್ಥಿಗಳ ಮೂಲ ದಾಖಲಾತಿಗಳನ್ನು ಅರ್ಜಿ ಪರಿಶೀಲನಾ ಸಮಿತಿಯೂ ಪರಿಶೀಲಿಸಿ ಕೆಲವೊಂದು ಮೂಲ ದಾಖಲಾತಿಗಳನ್ನು ಸಲ್ಲಿಸದ ಕಾರಣ ಮೂಲ ದಾಖಲಾತಿಗಳನ್ನು ದಿನಾಂಕ: 12.07.2017ರೊಳಗಾಗಿ ಒದಗಿಸುವ ಷರತ್ತಿನ ಮೇಲೆ ಸಂದರ್ಶನಕ್ಕೆ ಕಳುಹಿಸಲಾಗಿರುತ್ತದೆ. ತದನಂತರ ಆಯ್ಕೆ ಪ್ರಕ್ರಿಯೆ ಸಮಿತಿಯೂ ಸದರಿ ಮೂವರು ಅಭ್ಯರ್ಥಿಗಳಿಗೆ ಕನ್ನಡ ಭಾಷಾ ಪರಿಣಿತಿ, ದೈಹಿಕ ಸಾಮರ್ಥ್ಯ, ಆನೆ ಸಾಕಾಣಿಕೆಯ ಪರಿಣಿತಿಯ ಬಗ್ಗೆ ಸಂದರ್ಶನವನ್ನು ನಡೆಸಿರುತ್ತಾರೆ. ಶ್ರೀ ಬಸವರಾಜು ಇವರು ಮೂಲ ದಾಖಲಾತಿಗಳನ್ನು ಸಲ್ಲಿಸಿದ್ದು, ಇವರು ಎಲ್ಲಾ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿರುವುದರಿಂದ, ಇವರ ಫಲಿತಾಂಶದ ವಿವರಗಳನ್ನು ಸಲ್ಲಿಸಿರುತ್ತಾರೆ. ಅಲ್ಲದೇ ಇನ್ನುಳಿದ ಇಬ್ಬರು ಅಭ್ಯರ್ಥಿಗಳು ಕೆಲವೊಂದು ಮೂಲ ದಾಖಲಾತಿಗಳನ್ನು ದಿನಾಂಕ: 12.07.2017ರ ಒಳಗೆ ಸಲ್ಲಿಸದ ಕಾರಣ ಹಾಗೂ ಸದರಿ ಅಭ್ಯರ್ಥಿಗಳು ಆನೆ ನಿರ್ವಹಣಾ ಸಾಮರ್ಥ್ಯದಲ್ಲಿ ಯಾವುದೇ ಅನುಭವವಿಲ್ಲದಿರುವುದು ಕಂಡುಬರುವುದರಿಂದ, ಅವರನ್ನು ಅನುತ್ತೀರ್ಣಗೊಳಿಸಲಾಗಿರುತ್ತದೆ ಎಂಬುದಾಗಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಲೈ ಮಹದೇಶ್ವರ ವನ್ಯಜೀವಿ ವಿಭಾಗ, ಕೊಳ್ಳೇಗಾಲ ಇವರು ವರದಿ ಮಾಡುತ್ತಾ, ಅಭ್ಯರ್ಥಿಗಳ ಕ್ರೋಢೀಕೃತ ಮೌಲ್ಯಮಾಪನ ಪಟ್ಟಿಯನ್ನು ಉಲ್ಲೇಖ (7)ರ ಪತ್ರದೊಂದಿಗೆ ಲಗತ್ತಿಸಿ ಈ ಕಛೇರಿಗೆ ಸಲ್ಲಿಸಿರುತ್ತಾರೆ. ಅದರಂತೆ ಅಭ್ಯರ್ಥಿಗಳು ಪಡೆದ ಸರಾಸರಿ ಅಂಕಗಳ ವಿವರ ಈ ಕೆಳಗಿನಂತಿದೆ.

| ಕ್ರ. ಸಂ | ಅರ್ಜಿ ಸಂಖ್ಯೆ | ಹೆಸರು | 100 ಅಂಕಗಳಿಗೆ ಪಡೆದಿರುವ ಸರಾಸರಿ ಅಂಕಗಳು |
|---|---|---|---|
| 1. | 5 | ಶ್ರೀ ಬಸವರಾಜು | 94.5 |
| 2. | 72 | ಶ್ರೀ ಎಸ್.ನಾಗರಾಜು | 35.5 |
| 3. | 80 | ಶ್ರೀ ಮಹಾಂತೇಶ್ ಮಾಲಿಮನಿ | 35.5 |

ಮೇಲಿನ ಪಟ್ಟಿಯಂತೆ ಆಯ್ಕೆ ಪ್ರಕ್ರಿಯೆ ಸಮಿತಿಯೂ ನೀಡಿರುವ ಅಂಕಪಟ್ಟಿ ಮತ್ತು ಇತರ ದಾಖಲಾತಿಗಳನ್ನು ಪರಿಶೀಲಿಸಿ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿದೆ. ಸದರಿ ತಾತ್ಕಾಲಿಕ ಆಯ್ಕೆ ಪಟ್ಟಿ ಮತ್ತು ಅಂಕಪಟ್ಟಿಯನ್ನು ಇದರೊಂದಿಗೆ ಲಗತ್ತಿಸಿ ತಮ್ಮ ಆದ್ಯ ಅವಗಾಹನೆಗೆ ಸಲ್ಲಿಸಿದೆ ಮತ್ತು ತಮ್ಮ ಅವಗಾಹನೆಗೆ ಸಲ್ಲಿಸಿದೆ.

ಗೌರವಗಳೊಂದಿಗೆ,

ತಮ್ಮ ನಂಬುಗೆಯ,

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ,
(ಪ್ರಾದೇಶಿಕ), ಚಾಮರಾಜನಗರ.

✓ ಈ ವೃತ್ತದ ಎಲ್ಲಾ ಘಟಕ/ ವಿಭಾಗಗಳಿಗೆ ಮಾಹಿತಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕೆ ಕಳುಹಿಸುತ್ತಾ, ಸದರಿ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ನಿಮ್ಮ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ತಿಳಿಸಿದೆ.

# ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ಆಯ್ಕೆ ಪ್ರಾಧಿಕಾರ, ಆನೆ ಕವಾಡಿಗಳ ನೇರ ನೇಮಕಾತಿ ಪ್ರಕ್ರಿಯೆ, ಚಾಮರಾಜನಗರ.

## ಆನೆ ಕವಾಡಿ (ಬ್ಯಾಕ್‌ಲಾಗ್) ಹುದ್ದೆಗೆ ನೇರ ನೇಮಕಾತಿ ಪ್ರಕ್ರಿಯೆಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿ.

| ಕ್ರ. ಸಂ | ಅರ್ಜಿ ಕ್ರಮ ಸಂಖ್ಯೆ | ಹೆಸರು | ಘಟಕ | 100 ಅಂಕಗಳಿಗೆ ಶೇಕಡಾವಾರು ಪಡೆದಿರುವ ಅಂಕ | ಮೀಸಲಾತಿ | ಷರಾ |
|---|---|---|---|---|---|---|
| 1. | 5 | ಶ್ರೀ ಬಸವರಾಜು | ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ, ಬಂಡೀಪುರ. | 94.50% | ಪರಿಶಿಷ್ಟ ಜಾತಿ (ಗ್ರಾಮೀಣ) | ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಈ ಹಿಂದಿನ ನೇರ ನೇಮಕಾತಿ ಪ್ರಕ್ರಿಯೆಯಲ್ಲಿ ಪರಿಶಿಷ್ಟ ಜಾತಿ (ಇತರೆ), ಪರಿಶಿಷ್ಟ ಜಾತಿ (ಮಹಿಳೆ) ಮತ್ತು ಪರಿಶಿಷ್ಟ ಜಾತಿ (ಗ್ರಾಮೀಣ) ಈ ಮೂರು ಹುದ್ದೆಗಳು ಬ್ಯಾಕ್‌ಲಾಗ್ ಹುದ್ದೆಗಳಾಗಿ ಉಳಿದಿದ್ದು, 2017-18ನೇ ಸಾಲಿನ ಆನೆ ಕವಾಡಿ (ಬ್ಯಾಕ್‌ಲಾಗ್) ನೇರ ನೇಮಕಾತಿ ಆಯ್ಕೆ ಪ್ರಕ್ರಿಯೆಯಲ್ಲಿ ಪರಿಶಿಷ್ಟ ಜಾತಿ (ಗ್ರಾಮೀಣ) ಅಭ್ಯರ್ಥಿಗೆ ಮೀಸಲಿದ್ದು, ಅದೇ ಪ್ರವರ್ಗದ ಅಭ್ಯರ್ಥಿಯಿಂದ ಭರ್ತಿ ಮಾಡಲಾಗಿದೆ. ಇನ್ನುಳಿದ ಪರಿಶಿಷ್ಟ ಜಾತಿ (ಇತರೆ) ಮತ್ತು ಪರಿಶಿಷ್ಟ ಜಾತಿ (ಮಹಿಳೆ). ಈ 2 ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದ ಕಾರಣ ಮುಂದಿನ ನೇರ ನೇಮಕಾತಿ ಪ್ರಕ್ರಿಯೆಯಲ್ಲಿ ಭರ್ತಿ ಮಾಡಿ ಸರಿದೂಗಿಸಿಕೊಳ್ಳಲಾಗುವುದು ಮತ್ತು ಸದರಿ ವಿಭಾಗದಲ್ಲಿ ಪ್ರವರ್ಗ-1 (ಇತರೆ), ಪ್ರವರ್ಗ-2(ಎ)(ಮಹಿಳೆ), ಈ ಮೀಸಲಾತಿಯ ಎರಡು ಬ್ಯಾಕ್‌ಲಾಗ್ ಹುದ್ದೆಗಳಿದ್ದು, ಈ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದ ಕಾರಣ, ಮುಂದಿನ ನೇರ ನೇಮಕಾತಿ ಪ್ರಕ್ರಿಯೆಯಲ್ಲಿ ಈ ಹುದ್ದೆಗಳನ್ನು ಭರ್ತಿ ಮಾಡಿ ಸರಿದೂಗಿಸಿಕೊಳ್ಳಲಾಗುವುದು. |
| | | | | | | ಬಿ.ಆರ್.ಟಿ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಈ ಹಿಂದಿನ ನೇರ ನೇಮಕಾತಿ ಪ್ರಕ್ರಿಯೆಯಲ್ಲಿ ಪರಿಶಿಷ್ಟ ಜಾತಿ (ಇತರೆ) ಹಾಗೂ ಪರಿಶಿಷ್ಟ ಜಾತಿ (ಗ್ರಾಮೀಣ) ಈ ಎರಡು ಹುದ್ದೆಗಳು ಬ್ಯಾಕ್‌ಲಾಗ್ ಆಗಿ ಉಳಿದಿದ್ದು, 2017-18ನೇ ಸಾಲಿನ ಆನೆ ಕವಾಡಿ (ಬ್ಯಾಕ್‌ಲಾಗ್) ನೇರ ನೇಮಕಾತಿ ಪ್ರಕ್ರಿಯೆಯಲ್ಲಿ ಸದರಿ ಮೀಸಲಾತಿಯ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳು ಲಭ್ಯವಾಗಿರುವುದಿಲ್ಲ. ಆದ್ದರಿಂದ ಈ 2 ಬ್ಯಾಕ್‌ಲಾಗ್ ಹುದ್ದೆಗಳನ್ನು ಮುಂದಿನ ನೇರ ನೇಮಕಾತಿಯಲ್ಲಿ ಭರ್ತಿ ಮಾಡಿ ಸರಿದೂಗಿಸಿಕೊಳ್ಳಲಾಗುವುದು. |

ಸ್ಥಳ : ಚಾಮರಾಜನಗರ.
ದಿನಾಂಕ: 17.07.2017.

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ,
(ಪ್ರಾದೇಶಿಕ), ಚಾಮರಾಜನಗರ.